**ದಿಃ 06-06-2022 ರಂದು ಮ.ಕಾ . ಅರ್ಜಿ ಸಂಖ್ಯೆ 6 ಮತ್ತು 7 ರ ಮೇಲಿನ ಆದೇಶದಂತೆ ಸಾಕ್ಷಿಯನ್ನು ದಿಃ 21-06-2022 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಈ ಅರ್ಜಿಯನ್ನು ನ್ಯಾಯಕ್ಕೋಸ್ಕರ ಹಾಕಿದ್ದೇನೆ. ನಾನು ಮುಖ್ಯ ವಿಚಾರಣೆ ಸಲ್ಲಿಸಿದ್ದು ಅದರಲ್ಲಿ ನಾನು ಹೇಳಿರುವ ಸಂಗತಿಗಳು ಗೊತ್ತಿದೆ. ನಾನು ಅದರಲ್ಲಿ ಅಪಘಾತ ಆಗಿ ಗಾಯ ಆದ ಬಗ್ಗೆ ಬರೆಸಿದ್ದೇನೆ. ನನಗೆ ಒಬ್ಬನೇ ಮಗನಿದ್ದು ಅವನ ಹೆಸರು ಸಂತೋಷ ಅವನ್ನು ಕೂಲಿ ಕೆಲಸ ಮಾಡುತ್ತಿದ್ದನು. ಯಾರು ಕೂಲಿ ಕೆಲಸಕ್ಕೆ ಕರೆಯುತ್ತಿದ್ದರು ಅಲ್ಲಿಗೆ ಹೋಗುತ್ತಿದ್ದ . ಟ್ರಾಕ್ಟರ್ ಗೆ ಎಡೆಮಟ್ಟೆ ತುಂಬಿಸಲು ಕರೆದುಕೊಂಡು ಹೋಗಿದ್ದಾಗ ಅಪಘಾತ ಆಗಿದೆ.

ನನ್ನ ಮಗ ಸ್ವಲ್ಪ ಮಾತಾಡುತ್ತಾನೆ ಊಟ ಮಾಡುವುದಿಲ್ಲ. ಮತ್ತು ಆತನಿಗೆ ಕೆಳಗೆ ಲೋಟ ಬಿದ್ದರು ತೆಗೆದುಕೊಳ್ಳಲು ಬರುವುದಿಲ್ಲ ಆ ಪರಿಸ್ಥಿತಿಯಲ್ಲಿದ್ದಾನೆ. ನಾನು ಹೇಳಿದಂತೆ ದಿಃ 26.10.2018 ರಂದು ಟ್ರಾಕ್ಟರ್ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗಿದ್ದಾಗ ಹಗ್ಗ ಕಟ್ಟುವಾಗ ಚಾಲಕನ ನಿರ್ಲಕ್ಷತನದಿಂದ ಅಪಘಾತದಿಂದ ಆತನಿಗೆ ಗಾಯಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಮಂಜಣ್ಣ ರವರು ಜಯಪುರ ದಲ್ಲಿ ವಾಸವಾಗಿದ್ದಾರೆ.

ಮಂಜಣ್ಣನ ಬಾಬ್ತು ಟ್ರಾಕ್ಟರ್ ಇದೆ . ಅದಕ್ಕೂ ಈ ಪ್ರಕರಣಕ್ಕೂ ಸಂಬಂದ ಇಲ್ಲ ಎಂದು ಪುನಃ ನುಡಿಯುತ್ತಾರೆ. ನನ್ನ ಅಣ್ಣ ಮಂಜಣ್ಣನ ಮನೆಯಲ್ಲಿ ಘಟನೆ ಪೂರ್ವದಲ್ಲಿ ಅದಕ್ಕಿಂತ ಪೂರ್ವದಲ್ಲಿ 5-6 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಎಂದರೆ ಹೋಗುತ್ತಾ ಬರುತ್ತಾ ಕೆಲಸ ಮಾಡುತ್ತಿದ್ದ ಎನ್ನುತ್ತಾರೆ ಅದನ್ನು ನನ್ನ ಮಗ ಸಂತೋಷನೇ ಡ್ರೈವಿಂಗ್ ಮಾಡುತ್ತಿದ್ದ ಎಂದರೆ ಸರಿಯಲ್ಲ. ಮತ್ತು ಜಯಪುರದ ರವಿ ಎಂಬುವರ ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ

ನನಗೆ ಗೊತ್ತಿಲ್ಲ.

-6-

ನನ್ನ ಮಗ ಗ್ಯಾರೇಜ್ನಲ್ಲಿ ಕೆಲಸ ಮಾಡುವಾಗ ಗ್ಯಾರೇಜ್ ನವರು 15 ಸಾವಿರ ಹಣಕೊಟ್ಟು ಅದನ್ನು ಬ್ಯಾಂಕಿಗೆ ಕಟ್ಟಲು ಹೇಳಿದಾಗ ಅದನ್ನು ಅನ್ಯಾಯವಾಗಿ ಇಸ್ಪೀಟ್ ಆಡಿ ಕಳೆದಿದ್ದಾನೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯ ಮುಂಬಾಗದಲ್ಲಿ ಶೇಖರಿಸಿದ್ದ ಸರ್ಕಾರಕ್ಕೆ ಕಬ್ಬಿಣಗಳನ್ನು ಅದನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರ ಮಂಜಣ್ಣನ ಟ್ರಾಕ್ಟರ್ ನಲ್ಲಿ ಕೆಲಸ ಮಾಡಿಕೊಂಡು ಅವರ ಜಮೀನುಗಳನ್ನು ಈ ಅಪಘಾತದ ಪೂರ್ವದಲ್ಲಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ಆದರೆ ಹೋಗುತ್ತಾ ಬರುತ್ತಾ ಇದ್ದ ಎಂದರೆ ಸರಿ . ಆತ ಟ್ರಾಕ್ಟರ್ ಚಾಲನೆ ಮಾಡುತ್ತಿದ್ದ ಚಾಲಕ ಆಗಿದ್ದನು ಎಂದರೆ ಆತ ಟ್ರಾಕ್ಟರ್ ಚಾಲನೆ ಬರುವುದಿಲ್ಲ.

ನಾನು ಅರ್ಜಿಯಲ್ಲಿ ಕಾಣಿಸಿದ 26.10.2018 ರಲ್ಲಿ ಆದ ಘಟನೆಯನ್ನು ಕಣ್ಣಾರೆ ನೋಡಿಲ್ಲ. ನನ್ನ ಅರ್ಜಿಯಲ್ಲಿ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ 26.10.2018 ರಂದು ಪೊಲೀಸ್ ಠಾಣೆಗೆ ದೂರು ದಾಖಲೆಕೊಂಡಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. 26.10.2018 ರ ಘಟನೆ ನಡೆಯಿತು ಎಂದು ಹೇಳಿದ್ದು ಪೊಲೀಸರಿಗೆ ದೂರು ಕೊಟ್ಟು ದೂರು ದಾಖಲಾದ ಬಗ್ಗೆ ಎಪ್.ಐ . ಆರ್ ಅಥವಾ ದೋಷಾರೋಪಣ ಪಟ್ಟಿ ಮುಂತಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

ನಿಪಿ-2 ರ ಪ್ರಕಾರ ದೂರನ್ನು ಕೊಡುವಾಗ ನನ್ನ ಮಗ ಸಂತೋಷ ಚೀರನಹಳ್ಳಿ ಗೇಟ್ ಕಡೆಯಿಂದ ಬೇರನಹಟ್ಟಿಗೆ ಹೋಗಲು ಪಿರ್ಯಾದುದಾರನ ಜಮೀನಿನ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವಾಗ ಅದೇ ವೇಳೆಗೆ ಚೀರನಹಳ್ಳಿ ಗೇಟ್ ಕಡೆಯಿಂದ ನಮ್ಮ ಗ್ರಾಮದ ವಾಸಿಯಾದ ಸಣ್ಣ ಕೆಂಚಪ್ಪ ತಂದೆ ಮಹೇಶ್ವರಪ್ಪ ಈತನು ಬೇರನಹಳ್ಳಿ ಕಡೆ ಹೋಗಲು ತನ್ನ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿ

ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಂತೋಷ ಎಂದರೆ ನನ್ನ ಮಗನಿಗೆ ಡಿಕ್ಕಿ



ಪಡಿಸಲಾಗಿದೆ ಎಂದು ದೂರು ನೀಡಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ಅದೇರೀತಿ ಆಸ್ಪತ್ರೆಯಲ್ಲಿ ನ ದಾಖಲೆಯಲ್ಲಿ ಕೂಡ ಬೈಕ್ ಡಿಕ್ಕಿ ಪಡಿಸಿ ಬಿದ್ದು ಗಾಯಗಳಾಗಿವೆ ಎಂದು ಕಾಣಿಸಿದೆ ಎಂದರೆ ಅವೆಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ಆ ರೀತಿ ಬೈಕಿನಿಂದ ಅಪಘಾತಗೊಂಡು ಗಾಯಗೊಂಡಿದ್ದಾಗಿ ಬೇರೆ ಪರಿಹಾರ ಪ್ರಕರಣ ದಾಖಲಿಸಿಲ್ಲ.

ದಿಃ 26.10.2018 ರಂದು ಘಟನೆ ಆಯಿತು ಎಂದು ಹೇಳಿದ್ದು ಟ್ರಾಕ್ಟರ್ ಸಂಖ್ಯೆ 16 ಟಿಎ 6357 ನೇ ಸಂಖ್ಯೆಯ ಟ್ರಾಕ್ಟರ್ ನಲ್ಲಿ ಕೂಲಿ ಕೆಲಸಕ್ಕೆಂದು ಕರೆದುಕೊಂಡು ಹೋಗಿ ಟ್ರೇಲರ್ ಗೆ ತೆಂಗಿನ ಮಟ್ಟೆಯನ್ನು ತುಂಬಿಸಿದ ನಂತರ ಟ್ರಾಕ್ಟರ್ ಟ್ರೇಲರ್ ಮೇಲೆ ಸಾಕ್ಷಿ –16 ಅಂದರೆ ನಿಪಿ–1 ರಲ್ಲಿ ಕಾಣಿಸಿದ ಸಾಕ್ಷಿಯು ಅಂದರೆ ನನ್ನ ಮಗನಿಗೆ ಹಗ್ಗ ಬಿಗಿಯಲು ಹೇಳಿದ್ದು ನನ್ನ ಮಗ ಹಗ್ಗ ಮೇಲೆ ಎಳೆಯುತ್ತಿರುವಾಗ ಸಡಿಲಗೊಳಿಸಲು ಹೇಳಿದಾಗ 1 ನೇ ಆರೋಪಿ ಅಂದರೆ ಸಣ್ಣಕೆಂಚಪ್ಪ ಅಂದರೆ ಈ ಪ್ರಕರಣದ 1 ನೇ ಎದುರುದಾರ ಹೇಳಿದ್ದರಿಂದ ಆತನ ಉದಾಸೀನದಿಂದ ಹಗ್ಗ ಸಡಿಲಗೊಳಿಸಿದ್ದರಿಂದ ಟ್ರೇಲರ್ ಮೇಲಿಂದ ಕೆಳಗೆ ಬಿದ್ದು ಗಾಯಗೊಂಡಿದ್ದಾಗಿ ಕಾಣಿಸಿದ್ದು ನಿಪಿ–1 ರ ಪ್ರಕಾರ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆ. ಆದರೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಕಾಣಿಸಿದಂತೆ 2 ನೇ ಎದುರುದಾರ ಟ್ರಾಕ್ಟರ್ ಟ್ರೇಲರ್ ನಲ್ಲಿ ತೆಂಗಿನ ಮರದ ತ್ಯಾಜ್ಯ ವಸ್ತುಗಳನ್ನು ತುಂಬಿಸಿ 1 ನೇ ಎದುರುದಾರನ ಆದೇಶದ ಮೇರೆಗೆ ಟ್ರಾಕ್ಟರ್ ಟ್ರೇಲರ್ ರೋಡ್ ಮೇಲೆ ನಿಂತು ಹಗ್ಗವನ್ನು ಬಿಗಿಯಾಗಿ ಎಳೆಯುತ್ತಿರುವಾಗ ಹಗ್ಗ ಅರಿದು ಆ ಸಮಯದಲ್ಲಿ 2 ನೇ ಎದುರುದಾರ ಟ್ರಾಕ್ಟರ್ ಚಾಲನೆ ಮಾಡುತ್ತಿದ್ದರಿಂದ ನನ್ನ ಮಗ ಬಿದ್ದು ಅಪಘಾತ ಆಗಿದೆ ಎಂದು ಹೇಳಿದ್ದೇನೆ ಒಟ್ಟಾರೆ ನನ್ನ ಮಗ ಟ್ರಾಕ್ಟರ್ ಟ್ರೈಲರ್ ಮೇಲಿಂದ ಬಿದ್ದಿದ್ದು ನಿಜ ಆದರೆ ನಾನು ಸ್ಥಳದಲ್ಲಿ ಇರಲಿಲ್ಲ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಮುಖ್ಯ

ವಿಚಾರಣಾ ಪ್ರಮಾಣಪತ್ರದಲ್ಲಿನ ವಿಚಾರಗಳನ್ನು ಓದಿಲ್ಲ ಎಂದರೆ ಸರಿಯಲ್ಲ

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಕಾಣಿಸಿದಂತೆ 2 ನೇ ಎದುರುದಾರ



ಟ್ರಾಕ್ಟರ್ ಟ್ರೇಲರ್ ನಲ್ಲಿ ತೆಂಗಿನ ಮರದ ತ್ಯಾಜ್ಯ ವಸ್ತುಗಳನ್ನು ತುಂಬಿಸಿ 1 ನೇ ಎದುರುದಾರನ ಆದೇಶದ ಮೇರೆಗೆ ಟ್ರಾಕ್ಟರ್ ಟ್ರೈಲರ್ ರೋಡ್ ಮೇಲೆ ನಿಂತು ಹಗ್ಗವನ್ನು ಬಿಗಿಯಾಗಿ ಎಳೆಯುತ್ತಿರುವಾಗ ಹಗ್ಗ ಅರಿದು ಆ ಸಮಯದಲ್ಲಿ 2 ನೇ ಎದುರುದಾರ ಟ್ರಾಕ್ಟರ್ ಚಾಲನೆ ಮಾಡುತ್ತಿದ್ದರಿಂದ ನನ್ನ ಮಗ ಬಿದ್ದು ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾನು ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದು ಅದರಲ್ಲಿ 2 ನೇ ಪುಟದಲ್ಲಿ ಹೇಳಿರುವ ಸಂಗತಿಗಳು ನಿಜ ಇರುತ್ತದೆ. ಅದು 2 ನೇಎದುರುದಾರನ ವಿರುದ್ಧ ನಾನು ಹೇಳಿದ್ದು ಹಾಗಾಗಿ 1 ನೇ ಎದುರುದಾರ ಯಾವುದೇ ಕಾರಣಕ್ಕೂ ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಎಲ್ಲಿಯೂ ಕೂಲಿ ಕೆಲಸ ಮಾಡುತ್ತಿದ್ದ ಎಂದು ಹೇಳಿಲ್ಲ ಬದಲಾಗಿ ವ್ಯವಸಾಯ ಮಾಡುತ್ತಿದ್ದ ಎಂದು ಹೇಳಿದೆ ಎಂದರೆ ಸಾಕ್ಷಿಯು ಕೂಲಿ ಕೆಲಸ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಆತ ಟ್ರಾಕ್ಟರ್ ಚಾಲನೆ ಮಾತ್ರ ಮಾಡುತ್ತಿದ್ದ ಎಂದರೆ ಸರಿಯಲ್ಲ

ಮಟ್ಟೆ ತುಂಬಿಸಲು ಟ್ರಾಕ್ಟರ್ ಮತ್ತು ಟ್ರೇಲರ್ 2 ಬೇಕು ಎಂದರೆ ಸರಿ . ಟ್ರಾಕ್ಟರ್ ಟ್ರೇಲರ್ ನಲ್ಲಿ ನನ್ನ ಮಗನನ್ನು ಕರೆದುಕೊಂಡು ಹೋದರು ಎಂದು ಹೇಳಿದ್ದು ಯಾರು ಟ್ರಾಕ್ಟರಿ ಚಾಲನೆ ಮಾಡಿದರು ಎಂದು ಗೊತ್ತಿಲ್ಲ. ಟ್ರಾಕ್ಟರ್ ಯಾರದು ಎಂದು ನನಗೆ ಗೊತ್ತಿಲ್ಲ ಕೆಂಚಪ್ಪನಿಗೆ ಗೊತ್ತಿದೆ ಟ್ರಾಕ್ಟರ್ ಟ್ರೇಲರ್ ಸಂಖ್ಯೆಯನ್ನು ನಾನು ಓದಿಲ್ಲ ಆದ್ದರಿಂದ ಹೇಳಲಾಗುವುದಿಲ್ಲ. ಟ್ರಾಕ್ಟರ್ ಟ್ರೇಲರನ್ನು ಯಾರು ಆ ದಿನ ಚಾಲನೆ ಮಾಡಿಕೊಂಡು ಹೋದರು ನನಗೆ ಗೊತ್ತಿಲ್ಲ.ಟ್ರಾಕ್ಟರ್ ಟ್ರೇಲರ್ ಮಟ್ಟೆ ತುಂಬಿಸಿದ ನಂತರ ಟ್ರಾಕ್ಟರ್ ಯಾರು ಚಾಲನೆ ಮಾಡಿದರು ನನಗೆ ಗೊತ್ತಿಲ್ಲ. ಅಪಘಾತದಿಂದ ನನ್ನ ಮಗನ ಸೊಂಟ ಮುರಿದು 1 ಮತ್ತು 2 ನೇ ಎದುರುದಾರ ನಿರ್ಲಕ್ಷತನದಿಂದ ಆಗಿದೆ ಆತನಿಗೆ ಗಾಯ ಆಗಿ ಆತ ಸೊಂಟ ಮುರಿದುಕೊಂಡಿದ್ದಾನೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ಈಗಲೂ ಚೆನ್ನಾಗಿದ್ದಾನೆ ನ್ಯಾಯಾಲಯಕ್ಕೆ ಬಂದರೆ ನಿಜ ಗೊತ್ತಾಗುತ್ತದೆ ಎಂದು ನನ್ನ ಮೂಲಕ ಸುಳ್ಳು ಅರ್ಜಿ



ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಎದುರುದಾರನ ನಿರ್ದೇಶನದ ಮೇರೆಗೆ ನನ್ನ ಮಗ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇರೀತಿ 26.10.2018 ರಂದು ಮದ್ಯಾಹ್ನ 2 ಗಂಟೆ ಸಮಯದಲ್ಲಿ 2 ನೇ ಎದುರುದಾರನ ಅಡಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. 26.06.2018 ಪಿರ್ಯಾದಿ ಮತ್ತು ಎಪ್ ಐ ಆರ್ ಪ್ರಕಾರ ಅದೇ ರೀತಿ ನಿಪಿ–15 ದೋಷಾರೋಪಣ ಪಟ್ಟಿ ಪ್ರಕಾರ ನನ್ನ ಮಗ ಮತ್ತು 1 ನೇ ಎದುರುದಾರನ ನಡುವೆ ಯಾವುದೇ ಕಾರ್ಮಿಕ ಹಾಗೂ ಮಾಲೀಕನ ಸಂಬಂದ ಇರುವುದಿಲ್ಲ ಎಂಬುದು ಸರಿಯಲ್ಲ.

ನಾನು ಈ ಕೇಸಿನಲ್ಲಿ ದಾಖಲಿಸಿದ ದಾಖಲೆಯಲ್ಲಿ ಏನೇನು ಸಂಗತಿಗಳು ಇವೆ ಎಂದು ಗೊತ್ತಿದೆ. 2 ನೇ ಎದುರುದಾರ ಸುಮಿತ್ರಮ್ಮ ಪರಿಚಯ ಇದ್ದಾರೆ ಅದೇ ರೀತಿ ಆತನ ಮಗ ಚಂದ್ರು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 2 ನೇ ಎದುರುದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹೊಳಲ್ಕೆರೆ ಆಸ್ಪತ್ರೆಗೆ ನನ್ನ ಮಗನನ್ನು ತೋರಿಸಿ ನಂತರ ಬಸವೇಶ್ವರ ಆಸ್ಪತ್ರೆ ಚಿತ್ರದುರ್ಗದಲ್ಲಿ ತೋರಿಸಿದ್ದಾಗಿ ಮತ್ತು ಆತನಿಗೆ ಚಿಕಿತ್ಸೆಗೆ 5 ರಿಂದ 6 ಲಕ್ಷ ಖರ್ಚು ಮಾಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗನನ್ನು ಡಾಕ್ಟರ್ ಮಂಜುನಾಥ ನೋಡಿದ್ದಾರೆ . ಆಗ ನಮ್ಮ ಮಗನ ಜೊತೆಗೆ ನಾನು ಹೋಗಿರಲಿಲ್ಲ. ನಾನು ನಡೆದುಕೊಂಡು ಹೋಗುತ್ತಿದ್ದಾಗ ಬೈಕಿನವನು ಡಿಕ್ಕಿಪಡಿಸಿ ಅಪಘಾತಗೊಂಡು ಗಾಯಗೊಂಡು ನಿಪಿ–14 ರಲ್ಲಿ ಕಾಣಿಸಿದೆ ಎಂದರೆ ಅದು ಸುಳ್ಳು ಮಾಹಿತಿ ಎಂದು ನುಡಿಯುತ್ತಾರೆ. ಅದನ್ನು ನನ್ನ ಮಗನೇ ಹೇಳಿದ್ದಾನೆ ಎಂದರೆ ಆ ರೀತಿ ಮಗ ಹೇಳಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮಗ ಹೇಳಿ ಬರೆಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಡಾ.ಮಂಜುನಾಥ ರವರನ್ನು ಹೊರತುಪಡಿಸಿ ಸರ್ಕಾರಿ

ಆಸ್ಪತ್ರೆಯಲ್ಲಿ ನೋಡಿದ ವೈದ್ಯರ ಮತ್ತು ಉಳಿದ ಆಸ್ಪತ್ರೆಯ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಅಂಗನ್ಯೂನತಾ ಪ್ರಮಾಣಪತ್ರ ವನ್ನು ಯಾವ ವೈದ್ಯರಿಂದ ಪಡೆದೆವು ಎಂದು ನನಗೆ



ಹೇಳಲಾಗುವುದಿಲ್ಲ. ನಾನು ವೈದ್ಯರ ಬಳಿ ಶೇ 95 ಬಾಗ ಅಂಗನ್ಯೂನತೆ ಆಗಿದೆಯೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ ನಾನು ಸಲ್ಲಿಸಿರುವ ವೈದ್ಯಕೀಯ ದಾಖಲೆಗಳು ಯಾವು ಕೂಡ ನಿಜವಾದ ದಾಖಲೆಗಳಲ್ಲ ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ಗಾಯದ ಪ್ರಮಾಣಪತ್ರದಲ್ಲಿ ಕಾಣಿಸಿದ ಗಾಯಕ್ಕೆ ಸಂಬಂದ ಪಟ್ಟಂತೆ ಯಾವುದೇ ವೈದ್ಯಕೀಯ ಬಿಲ್ಲು ಅಥವಾ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–22 ರ ಅಂಗನ್ಯೂನತಾ ಪ್ರಮಾಣಪತ್ರ ಸಹ ರೋಡ್ ಟ್ರಾಫಿಕ್ ಅಪಘಾತ ಎಂದು ಕಾಣಿಸಿದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡುತ್ತಾರೆ ಎಂದರೆ ಸರಿಯಲ್ಲ. ರಾಡ್ ಹಾಕಿಸಲು ಆಪರೇಷನ್ ಮಾಡಲು ಖರ್ಚಾಗಿದೆ ಎಂದು ನುಡಿಯುತ್ತಾರೆ. ನಾನು 5 ಲಕ್ಷ ಖರ್ಚು ಮಾಡಿದ್ದಾಗಿ ಹೇಳಿದ್ದು ಆ ಬಗ್ಗೆ ಯಾವುದೇ ಬಿಲ್ಲುಗಳನ್ನು ಹಾಜರುಮಾಡದೆ ರೂ. 9 ಸಾವಿರ ಬಿಲ್ಲುಗಳಿಗೆ ಬಿಲ್ಲು ಹಾಜರುಮಾಡಿದ್ದು ಅದು ಕೂಡ ಸುಳ್ಳು ದಾಖಲೆ ಎಂದರೆ ಸರಿಯಲ್ಲ.

ಬಸವೇಶ್ವರ ಆಸ್ಪತ್ರೆಗೆ ನಾನು ಕರೆದುಕೊಂಡು ಹೋಗಿಲ್ಲ. ರೋಡ್ ಟ್ರಾಫಿಕ್ ಆಕ್ಸಿಡೆಂಟ್ ಎಂದು ನಿಪಿ–20 ರಲ್ಲಿ ಕಾಣಿಸಿದೆ ಎಂದರೆ ಆ ಬಗ್ಗೆ ನನಗೆ ಹೇಳಲಾಗುವುದಿಲ್ಲ. ಸರ್ಕಾರಿ ಆಸ್ಪತ್ರೆಯ ದಾಖಲೆಯಲ್ಲಿ ನಿಪಿ–14 ರಲ್ಲಿ ಕೂಡ ರಸ್ತೆಯ ಅಪಘಾತದಲ್ಲಿ ಗಾಯಗೊಂಡಿದ್ದಾಗಿ ಕಾಣಿಸಿದೆ ಎಂದರೆ ಆ ಬಗ್ಗೆ ನನಗೆ ಹೇಳಲಾಗುವುದಿಲ್ಲ.

ನನಗೆ ಯಾವುದೇ ಜಮೀನು ಇಲ್ಲ. ನಿಪಿ–16 ರಲ್ಲಿ ಕಂಡ ದಾಖಲೆಯಲ್ಲಿನ ಹೆಸರು 3 ಎಕರೆ 16 ಗುಂಟೆ ನನ್ನ ಗಂಡನ ಹೆಸರಿನಲ್ಲಿದೆ ಅದನ್ನು ನಾವೇ ಸಾಗು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಮ್ಮಲ್ಲಿ ಎತ್ತು ಓರಿ ಕರ ಇಲ್ಲ ಅದನ್ನು ಟ್ರಾಕ್ಟರ್ ನಿಂದಲೇ ಉಳುಮೆ ಮಾಡಬೇಕೆಂದರೆ ಸರಿ . 2 ನೇ ಎದುರುದಾರರಾದ ಸುಮಿತ್ರಮ್ಮ ಮತ್ತು ನಾನು ಒಂದೇ ಊರಿನವರಾಗಿದ್ದರಿಂದ ಸ್ನೇಹಿತರಾಗಿದ್ದು ನಾವು ಮಾತಾಡಿಕೊಳ್ಳುತ್ತೇವೆ ಎಂದರೆ ಸರಿಯಲ್ಲ.

ಆಕೆಯ ಮತ್ತು ಅವರ ಮಕ್ಕಳ ವಿರುದ್ಧ ಗಂಗಮ್ಮ ಎಂಬುವರು ಅಂದರೆ 2 ನೇ ಎದುರುದಾರರ ಮಗಳು ಪಾಲು ವಿಭಾಗ ಕೋರಿ ದಾವಾ ಸಲ್ಲಿಸಿದ್ದು ಕೇಸ್ ನಡೆಯುವಾಗ



ಗಂಗಮ್ಮ ತೀರಿಕೊಂಡಿದ್ದು ಅವಶ್ಯವಾಗಿ 1 ನೇ ಎದುರುದಾರ ಮತ್ತು 2 ನೇ ಎದುರುದಾರಳು ಮತ್ತು ಅವರ ಮಕ್ಕಳ ನಡುವೆ ಗಲಾಟೆಯಾಯಿತು ಆ ವಿಚಾರವಾಗಿ 1 ಮತು 2 ನೇ ಎದುರುದಾರಳ ನಡುವೆ ಮನಸ್ತಾ ಪ ಆಯಿತು ಎಂದರೆ ನನಗೆ ಗೊತ್ತಿಲ್ಲ. ಆಗಾಗಿ ನಾನು ಮತ್ತು 2 ನೇ ಎದುರುದಾರಳು ಇಬ್ಬರೂ ಸೇರಿ ಪರಸ್ಪರ ಶರೀಕಾಗಿ ನನ್ನ ಮಗ ಸಂತೋಷ ನಡೆದುಕೊಂಡು ಹೋಗುತ್ತಿರುವಾಗ ಬೈಕಿನಿಂದ ಅಪಘಾತಗೊಂಡು ಹೋಗುವಾಗ ಗಾಯಗೊಂಡಿದ್ದರೂ ಸಹ ನಂತರದಲ್ಲಿ ಅದನ್ನು ಬದಲಾಯಿಸಿ 1 ನೇ ಎದುರುದಾರನ ಅಡಿಯಲ್ಲಿ ಕೆಲಸ ಮಾಡುತ್ತಿರುವಾಗ ಹಗ್ಗ ಸಡಿಲವಾಗಿ ಆತನು ನಿರ್ಲಕ್ಷ ವಹಿಸಿದ್ದರಿಂದ ನನ್ನ ಮಗ ಟ್ರೇಲರ್ ಮೇಲಿಂದ ಬಿದ್ದು ಗಾಯಗೊಂಡಿದ್ದಾಗಿ ಒಂದು ಸುಳ್ಳು ಪಿರ್ಯಾದನ್ನು ನಂತರದಲ್ಲಿ ಕೊಟ್ಟು ಈ ಎದುರುದಾರನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಮತ್ತು 2 ನೇ ಎದುರುದಾರರು ಇಬ್ಬರೂ ಸೇರಿ ಮತ್ತು ಆಕೆಯ ಮಗ ಎಲ್ಲರೂ ಸೇರಿಕೊಂಡು ಈ ರೀತಿ ಸುಳ್ಳು 2 ನೇ ದೂರು ನೀಡಿ ಪೊಲೀಸರಿಗೆ ಹೇಳಿ 2 ನೇ ಎದುರುದಾರಳ ಟ್ರಾಕ್ಟರನ್ನು ಈ ಪ್ರಕರಣಕ್ಕೆ ತಂದು ಹಾಕಿ ಪೊಲೀಸರಿಂದ ಜೋರು ಮಾಡಿಸಿ ಅದೇ ರೀತಿ ಸುಳ್ಳು ದೋಷಾರೋಪಣ ಪಟ್ಟಿ ಕೂಡ ಸಲ್ಲಿಸಲಾಯಿತು ಎಂದರೆ ಸರಿಯಲ್ಲ. 1 ನೇ ಎದುರುದಾರನಿಗೆ ತೊಂದರೆ ಕೊಡುವ ಉದ್ದೇಶದಿಂದಲೇ 2 ನೇ ಎದುರುದಾರಳ ಮಾತು ಕೇಳಿ ಉದ್ದೇಶಪೂರ್ವಕವಾಗಿ ಬೈಕಿನ ಮಾಲೀಕ ಮತ್ತು ವಿಮಾ ಕಂಪನಿಯನ್ನು ಪಾರ್ಟಿ ಮಾಡಿಲ್ಲ ರಸ್ತೆ ಅಪಘಾತದಿಂದ ಆದ ಗಾಯಕ್ಕಾಗಿ ಪರಿಹಾರಕ್ಕಾಗಿ ಅರ್ಜಿ ಕೂಡ ಹಾಕಲಿಲ್ಲ ಎಂದರೆ ಸರಿಯಲ್ಲ.

ಮಗ ಮತ್ತು 1 ನೇ ಎದುರುದಾರನ ನಡುವೆ ಕಾರ್ಮಿಕ ಹಾಗೂ ಮಾಲೀಕ ಸಂಬಂದ ಇಲ್ಲ ಗೊತ್ತಿದ್ದರೂ ಸಹ 2 ನೇ ಎದುರುದಾರಳು ನಾನು ಸೇರಿ ಪೊಲೀಸರ ನ್ನು ದುರ್ಬಳಕೆ

ಮಾಡಿಕೊಂಡು ಈ ಒಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಪರಿಹಾರ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು



ಪರಿಹಾರ ಕೋರಿ ಸಲ್ಲಿಸಿರುವ ಅರ್ಜಿ ನಾನು ಪ್ರಕರಣದಲ್ಲಿ ಹಾಜರು ಮಾಡಿರುವ ದಾಖಲೆಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರಾದ ಸುಮಿತ್ರಮ್ಮ ಟ್ರಾಕ್ಟರ್ ಗೆ ಟ್ರಾಲಿ ಇದೆ. ಆ ಟ್ರಾಲಿ ನಂಬರ್ ಪ್ರಕರಣದಲ್ಲಿ ಹೇಳಿಲ್ಲ. ಎಂದರೆ ಟ್ರೇಲರ್ ನಂಬರ್ ಗೊತ್ತಿಲ್ಲ. ನನ್ನ ಅರ್ಜಿಯಲ್ಲಿ ಟ್ರಾಕ್ಟರ್ ಇಂಜಿನ್ ನಂಬರ್ ಮಾತ್ರ ಕಾಣಿಸಿದ್ದು ಟ್ರಾಲಿ ನಂಬರ್ ಕಾಣಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ , ಆ ರೀತಿ ಟ್ರೇಲರ್ ನಲ್ಲಿ ನನ್ನ ಮಗ ಕೆಲಸ ಮಾಡುತ್ತಿದ್ದ ಬಗ್ಗೆ ಟ್ರೇಲರ್ ದೋಷಾರೋಪಣ ಪಟ್ಟಿಯಲ್ಲಿ ಕಾಣಿಸದೇ ಇರುವ ಬಗ್ಗೆ ಪೊಲೀಸರು ಕಾರಣ ನೀಡಿಲ್ಲ ಮತ್ತು ದಾಖಲೆ ಪಡೆಯಲು ಪ್ರಯತ್ನ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಟ್ರೇಲರ್ ಇಲ್ಲದೆ ಮಟ್ಟಿ ತುಂಬಿಸಲಾಗುವುದಿಲ್ಲ ಎಂದರೆ ಸರಿ . ಹಾಗೂ ಯಾವುದೇ ಟ್ರೇಲರ್ ಬಾಗಿ ಯಾಗದೇ ಇದ್ದರೂ ಸಹ ಪೊಲೀಸರಿಂದ ಒಂದು ಕಲ್ಪಿತ ಟ್ರೇಲರ್ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಟ್ರಾಕ್ಟರ್ ಮತ್ತು ಟ್ರೇಲರ್ ಬಾಗಿಯಾಗದಿರುವ ಕಾರಣದಿಂದಲೇ ಟ್ರೇಲರ್ ಸಂಖ್ಯೆ ಕಾಣಿಸಲಾಗಿಲ್ಲ ಎಂದರೆ ಸರಿಯಲ್ಲ.

ಕಾರ್ಮಿಕ ಪರಿಹಾರ ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚಿನ ಪರಿಹಾರ ಸಿಗುತ್ತದೆ ಎಂಬ ಕಾರಣಕ್ಕೆ 1 ನೇ ಎದುರುದಾರನ ವಿರುದ್ಧ ಆತ ನನ್ನ ಮಗನನ್ನು ಯಾವುದೇ ಸಮಯದಲ್ಲಿ ಮಾಲೀಕನಾಗಿ ಕೆಲಸಕ್ಕೆ ಹೋಗಿರದೇ ಇದ್ದರೂ ಮತ್ತು ನಾನು ಹೇಳಿದ ಟ್ರಾಕ್ಟರ್ ಮತ್ತು ಟ್ರೇಲರ್ ಬಾಗಿ ಯಾಗದೇ ಇದ್ದರೂ ನಾನು ಮತ್ತು 2 ನೇ ಎದುರುದಾರ ಅವರ ಮಕ್ಕಳು ಮತ್ತು ನನ್ನ ಮಗ ಮತ್ತು ಪೊಲೀಸರು ಎಲ್ಲರೂ ಸೇರಿ ದಾಖಲೆಗಳನ್ನು ತಿದ್ದುಪಡಿ ಮಾಡಿ ಒಂದು ಸುಳ್ಳು ಪ್ರಕರಣ ದಾಖಲಿಸಿ ಆ ಪ್ರಕಾರ ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಪರಿಹಾರ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಟ್ರಾಕ್ಟರ ಯಾರು ಚಾಲನೆ ಮಾಡುತ್ತಿದ್ದರು ನನಗೆ ಗೊತ್ತಿಲ್ಲ . ನನ್ನ

ಮಗನಿಗೆ ಗೊತ್ತಿದೆ. ಒಂದು ವೇಳೆ ಆ ರೀತಿ ಹಳ್ಳಿಯಲ್ಲಿ ಒಮ್ಮೆ ಕೂಲಿಗೆ ಕರೆದುಕೊಂಡು ಹೋದರೆ ಭತ್ತ ಮಾತ್ರ ಕೊಡುತ್ತಾರೆ ಎಂದರೆ ಸರಿಯಲ್ಲ

-13-

ನನ್ನ ಮಗ ಕೂಲಿಯಿಂದ 15 ಸಾವಿರ ದುಡಿಯುತ್ತಿದ್ದ ಮತ್ತು ಭತ್ತ ಪಡೆಯುತ್ತಿದ್ದ ಎಂದರೆ ಸರಿಯಲ್ಲ. ಮತ್ತು ಈಗ ಆತನಿಗೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟ್ಯಾಕ್ಟರನ್ನು ಬಾಡಿಗೆಗೆ ಸಹ 1 ನೇ ಎದುರುದಾರ ತೆಗೆದುಕೊಂಡು ಹೋಗಿರಲಿಲ್ಲ ನನ್ನ ಮಗ ಕೂಲಿಗೆ ಸಹ ಹೋಗಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರನಿಂದ ಈ ನನ್ನ ಮಗನಿಗೆ ಪರಿಹಾರ ಪಡೆಯಲು ಯಾವುದೇ ರೀತಿ ಕಾರಣಗಳಿಲ್ಲ ಮತ್ತು ಆ ರೀತಿ ಯಾವುದೇ ರೀತಿ ಕಾರ್ಮಿಕ ಮತ್ತು ಮಾಲೀಕ ಸಂಬಂದ ಇರಲಿಲ್ಲ ಮತ್ತು ಟ್ರಾಕ್ಟರ್ ಟ್ರೇಲರ್ ಬಾಗಿಯಾಗಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರಳ ಸುಮಿತ್ರಮ್ಮ ಟ್ರಾಕ್ಟರ್ ಗೆ ಯಾವಾಗಲೂ ಕೆಲಸಕ್ಕೆ ಹೋಗುತ್ತಿದ್ದು ಆಕೆಯನ್ನು ಉಳಿಸಲು ಸಹ ಒಂದು ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**2 ನೇ ಎದುರುದಾರರ ಪರ ಪಾಟೀ ಸವಾಲಿಗೆ ಕಾಲಾವಕಾಶ ಕೋರಲಾಗಿದ್ದು ನೀಡಲಾಯಿತು.**

.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ